# ಕರ್ನಾಟಕ ಗೃಹ ಮಂಡಳಿ

ಗೃಹ ಆಯುಕ್ತರವರ ಕಚೇರಿ, 3 ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ,
ಬೆಂಗಳೂರು-560009
ದೂರವಾಣಿ: 080-22273511-16, ವೆಬ್‌ಸೈಟ್:www.karnatakahousing.com

## ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಾಕರಾಮನಹಳ್ಳಿ, ಬೋರೇಹಳ್ಳಿ, ಮುದ್ದಾಪುರ-ಕರೇನಹಳ್ಳಿ ಗ್ರಾಮಗಳಲ್ಲಿ ಅಭಿವೃದ್ಧಿಪಡಿಸಿರುವ ಮನೆ/ನಿವೇಶನಗಳ ಹಂಚಿಕೆಗೆ ಲಾಟರಿ ವೇಳಾಪಟ್ಟಿ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಕಾಕರಾಮನಹಳ್ಳಿ ಗ್ರಾಮದ ಸರ್ವೆ ನಂ.1 ಮತ್ತು ಇತರೆ, ಬೋರೇಹಳ್ಳಿ ಗ್ರಾಮದ ಸರ್ವೆ ನಂ.1 ಮತ್ತು ಇತರೆ, ಮುದ್ದಾಪುರ-ಕರೇನಹಳ್ಳಿ ಗ್ರಾಮದ ಸರ್ವೆ ನಂ.76 ಮತ್ತು ಇತರೆಯಲ್ಲಿನ ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನೇತಾಜಿ ಸುಭಾಷ್‌ಚಂದ್ರ ಬೋಸ್ ಬಡಾವಣೆಯಲ್ಲಿ ಎಲ್.ಐ.ಜಿ. ಎಂ.ಐ.ಜಿ. ಹೆಚ್.ಐ.ಜಿ. ವರ್ಗದ ನಿವೇಶನಗಳಿಗೆ 2006-2007 ರಲ್ಲಿ ಬೇಡಿಕೆ ಸಮೀಕ್ಷೆಯಡಿ ಅರ್ಜಿಗಳನ್ನು ಆಹ್ವಾನಿಸಿದ್ದು, ದಿನಾಂಕ: 12-07-2013 ರಂದು ಪತ್ರಿಕಾ ಪ್ರಕಟಣೆ ನೀಡಿ ಸದರಿ ಅರ್ಜಿದಾರರಿಗೆ ಆರಂಭಿಕ ಠೇವಣಿ ಪಾವತಿಸಲು ಸೂಚಿಸಲಾಗಿತ್ತು. ಅದರಂತೆ ದಿನಾಂಕ: 23-07-2014 ರಂದು ತಾತ್ಕಾಲಿಕ ಪಟ್ಟಿ, ಆಕ್ಷೇಪಣೆ ಸಲ್ಲಿಸಲು ಕಡೆಯ ದಿನಾಂಕ ಹಾಗೂ ಅರ್ಹ ಅರ್ಜಿದಾರರ ಪ್ರಕಟಣೆ ಪಟ್ಟಿ ದಿನಾಂಕವನ್ನು ನಿಗದಿಪಡಿಸಿ ಲಾಟರಿ ನಡೆಯುವ ದಿನಾಂಕವನ್ನು ಪ್ರತ್ಯೇಕವಾಗಿ ಪ್ರಕಟಣೆ ನೀಡಿ ತಿಳಿಸಲಾಗುವುದೆಂದು ತಿಳಿಸಲಾಗಿತ್ತು.

ದಿನಾಂಕ: 03-06-2014 ರಂದು ವಿಜಯಕರ್ನಾಟಕ ಮತ್ತು ಡೆಕನ್ ಹೆರಾಲ್ಡ್ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ EWS ವರ್ಗದ ನಿವೇಶನಗಳಿಗೆ ಹೊಸದಾಗಿ ಅರ್ಜಿಗಳನ್ನು ಸಲ್ಲಿಸಲು ತಿಳಿಸಲಾಗಿತ್ತು. ಸಾರ್ವಜನಿಕ ಪ್ರಕಟಣೆಗೆ ಅನುಗುಣವಾಗಿ ಎಲ್.ಐ.ಜಿ. ಎಂ.ಐ.ಜಿ. ಹೆಚ್.ಐ.ಜಿ. ವರ್ಗದ ಅರ್ಹ ಅರ್ಜಿದಾರರ ಪಟ್ಟಿಯನ್ನು ಈ ಹಿಂದೆಯೇ ಪ್ರಕಟಿಸಲಾಗಿದ್ದು, EWS ವರ್ಗಕ್ಕೆ ಆರಂಭಿಕ ಠೇವಣಿ ಪಾವತಿಸಿರುವ ಅರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿಯನ್ನು ಪ್ರಕಟಿಸಲಾಗುತ್ತಿದೆ. ಕೆಳಕಾಣಿಸಿದಂತೆ ಆಕ್ಷೇಪಣೆ ಸಲ್ಲಿಸಲು ಹಾಗೂ ಅರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಲು ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ.

ಕರ್ನಾಟಕ ಗೃಹ ಮಂಡಳಿ ಹಂಚಿಕೆ ರೆಗ್ಯುಲೇಶನ್ಸ್ 1983ರ ನಿಯಮ 9ರ ಅನ್ವಯ ಪ್ರವರ್ಗವಾರು ಮೀಸಲಾತಿಯಡಿಯಲ್ಲಿ ಲಾಟರಿ ಮುಖಾಂತರ ಹಂಚಿಕೆ ಮಾಡಲು ಈ ಕೆಳಕಂಡ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

| ಕ್ರ. ಸಂ. | ಬಡಾವಣೆ | EWS ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ | ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸ್ಥಳ | ಅರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ ಮತ್ತು ಸ್ಥಳ | ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ ಹಾಗೂ ಸಮಯ |
|---|---|---|---|---|---|
| 1 | ಸುಭಾಷ್‌ಚಂದ್ರಬೋಸ್ ಬಡಾವಣೆ ಬಿಡದಿ ರಾಮನಗರ ಜಿಲ್ಲೆ | 07-02-2018 | 12-02-2018 | 15-02-2018 | ಲಾಟರಿ ದಿನಾಂಕವನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು |
| | | ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಚೇರಿ, ರಾಮನಗರ ಮತ್ತು ಕೇಂದ್ರ ಕಚೇರಿ, ಕಾವೇರಿ ಭವನ, ಬೆಂಗಳೂರು | | | |

## ಷರತ್ತು ಮತ್ತು ನಿಬಂಧನೆಗಳು

1) ಅರ್ಜಿ ನೋಂದಾಯಿಸಿ, ನಿಗದಿತ ಆರಂಭಿಕ ಠೇವಣಿ ಪಾವತಿಸಿರುವ ಅರ್ಜಿದಾರರನ್ನು ಮಾತ್ರ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗಿದೆ. 2) 2006 ಮತ್ತು 2007 ರಲ್ಲಿ ಬೇಡಿಕೆ ಸಮೀಕ್ಷೆಗೆ ಅನುಗುಣವಾಗಿ ಅರ್ಜಿ ಸಲ್ಲಿಸಿದ್ದು, ದಿನಾಂಕ: 12-07-2013 ಹಾಗೂ 03-06-2014ರ ಪ್ರಕಟಣೆಗೆ ಅನುಗುಣವಾಗಿ ಆರಂಭಿಕ ಠೇವಣಿ ಪಾವತಿಸಿರುವ ಅರ್ಜಿದಾರರಿಗೆ ಪ್ರವರ್ಗವಾರು ಲಾಟರಿ ಮಾಡಲಾಗುವುದು. 3) ಆರ್ಥಿಕ ದುರ್ಬಲ (EWS) ವರ್ಗದಲ್ಲಿ ಅರ್ಜಿ ಸಲ್ಲಿಸಿ, ವರಮಾನ ದೃಢೀಕರಣ ಪತ್ರವನ್ನು ನೀಡದಿದ್ದಲ್ಲಿ ಹಂಚಿಕೆ ಪತ್ರವನ್ನು ತಡೆಹಿಡಿಯಲಾಗುವುದು. ಹಾಗೂ ರೂ.17,000/- ಕ್ಕಿಂತ ಹೆಚ್ಚಿನ ವರಮಾನ ಘೋಷಿಸಿದ ಅರ್ಜಿದಾರರನ್ನು ಅನರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು ನಿಗದಿಪಡಿಸಿರುವ ದಿನಾಂಕದೊಳಗಾಗಿ ತಹಶೀಲ್ದಾರರವರಿಂದ ಪಡೆದ ವರಮಾನ ಪತ್ರವನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿದಾರರನ್ನು ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದು. 4) 2006-07 ರಲ್ಲಿ ಬೇಡಿಕೆ ಸಮೀಕ್ಷೆಯಡಿ ನೀಡಿರುವ ಪ್ರಕಟಣೆಯಂತೆ ಎಸ್.ಸಿ/ಎಸ್.ಟಿ. ಅರ್ಜಿಗಳನ್ನು ಒಟ್ಟಿಗೆ ಸೇರಿಸಿ ಲಾಟರಿ ಮಾಡಲಾಗುವುದು. 5) ಲಾಟರಿಯಲ್ಲಿ ಯಶಸ್ವಿಯಾದ ಅರ್ಜಿದಾರರು ನಿವೇಶನ/ಮನೆ ಬೇಡವೆಂದು ಕೋರಿಕೆ ಸಲ್ಲಿಸಿದಲ್ಲಿ ಹಾಗೂ ಹಣ ಪಾವತಿಸದೇ ಹಂಚಿಕೆ ರದ್ದತಿಯಾದಲ್ಲಿ, ಪಾವತಿಸಿರುವ ಆರಂಭಿಕ ಠೇವಣಿಯಲ್ಲಿ ಶೇಕಡ 25 ರಷ್ಟು ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. 6) ನಿವೇಶನದ ಅಳತೆ ಮತ್ತು ಮನೆಗಳ ಬಿಲ್ಟಪ್ ಏರಿಯಾದಲ್ಲಿ ವ್ಯತ್ಯಾಸವೇನಾದರು ಕಂಡುಬಂದಲ್ಲಿ ಅದರ ನಿಖರ ಅಳತೆ ಮತ್ತು ವಿಸ್ತೀರ್ಣಕ್ಕನುಗುಣವಾಗಿ ದರವು ಒಳಪಟ್ಟಿರುತ್ತದೆ. ಪ್ರಕಟಣೆಗಳಲ್ಲಿ ತಿಳಿಸಿದ ಸ್ವತ್ತುಗಳ ಸಂಖ್ಯೆಗಳು ಬದಲಾವಣೆಗೆ ಒಳಪಟ್ಟಿರುತ್ತವೆ. 7) ಕರ್ನಾಟಕ ಗೃಹ ಮಂಡಳಿ ರೆಗ್ಯೂಲೇಶನ್ಸ್ 1983 ರನ್ವಯ ಹಂಚಿಕೆಗೆ ಸಂಬಂಧಿಸಿದ ಎಲ್ಲಾ ಹಕ್ಕುಗಳನ್ನು ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಗೃಮಂ, ರಾಮನಗರ ಇವರ ಮೊಬೈಲ್ ನಂ. 9448448944 / 9844742363 ಅಥವಾ ಕಚೇರಿ ದೂರವಾಣಿ ಸಂಖ್ಯೆ: 080-27275632 ರಲ್ಲಿ, ಅಥವಾ ಉಪ ಪ್ರಧಾನ ವ್ಯವಸ್ಥಾಪಕರು, (ಗಾಸೇ), ಹಾಗೂ ಕಂದಾಯ ಅಧಿಕಾರಿ, ಹಂಚಿಕೆ ಶಾಖೆ, ಕರ್ನಾಟಕ ಗೃಹ ಮಂಡಳಿ, 4ನೇ ಮಹಡಿ, ಕಾವೇರಿ ಭವನ, ಬೆಂಗಳೂರು ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-22273511 ವಿಸ್ತರಣೆ: 347/307/335 ರಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ www.karnatakahousing.com or www.khbcustomerinfo.com ಯಿಂದ ಮಾಹಿತಿ ಪಡೆಯಬಹುದು

ಸಹಿ/- ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ದಿನಾಂಕ: 06.02.2018

DIPR/DDU/1902/Yakshi/2017-18

Scanned by CamScanner